Despatched

Date 29-9-05

STP

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: STP-79/05-06

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
7ನೇ ಮಹಡಿ, ಜಲಮಂಡಳಿ ಕಟ್ಟಡ,
ಕಾವೇರಿ ಭವನ, ಬೆಂಗಳೂರು
ದಿನಾಂಕ: 23-09-2005

## ಸುತ್ತೋಲೆ

ವಿಷಯ: ಕೋರ್ಟ್-ಫೀ ಮಾರಾಟಗಾರರಿಗೆ ದಸ್ತು ಬರಹಗಾರರ ಪರವಾನಿಗೆ ನೀಡುವ ಬಗ್ಗೆ

ಉಲ್ಲೇಖ: ಸಂಖ್ಯೆ: RGN 46/2001-02/ದಿನಾಂಕ 16-03-2005.

---

ಪ್ರಸ್ತಾವಿತ ವಿಷಯದ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ನ್ಯಾಯಿಕ ಮುದ್ರಾಂಕ ಮಾರಾಟಗಾರರಿಗೆ ದಸ್ತಾವೇಜು ಬರಹಗಾರರ ಪರವಾನಗಿ ನೀಡುತ್ತಿಲ್ಲವೆಂಬ ದೂರು ಬಂದಿರುತ್ತೆ, ಈ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ತಿಳಿಯಪಡಿಸುವುದೇನೆಂದರೆ ಉಲ್ಲೇಖದ ಅಧಿಸೂಚನೆಯಂತೆ ಕರ್ನಾಟಕ ನೋಂದಣಿ (ದಸ್ತಾವೇಜು ಬರಹಗಾರರ ಪರವಾನಿಗಿ)(ತಿದ್ದುಪಡಿ) ನಿಯಮಗಳು 2004 ರ ನಿಯಮ 3ಕ್ಕೆ ತಂದಿರುವ ತಿದ್ದುಪಡಿಯಂತೆ, ದಿನಾಂಕ: 31-03-2003 ರಂದು ಮುದ್ರಾಂಕ ಮಾರಾಟಗಾರರ ಪರವಾನಗಿ ಹೊಂದಿದ್ದು ಪರವಾನಗಿ ಪ್ರಾಧಿಕಾರಿಗೆ ಅಪರಪೂರ್ವ ಪರ ಚರಿತ್ರೆ ಮತ್ತು ಪತ್ರ ಬರೆಯುವ ಜ್ಞಾನದ ಬಗ್ಗೆ ತೃಪ್ತಿ ಹೊಂದಿದಲ್ಲಿ ಅಂತಹವರಿಗೆ ಪರವಾನಗಿ ನೀಡಬಹುದಾಗಿರುತ್ತೆ. ಈ ಮೇಲ್ಕಂಡ ತಿದ್ದುಪಡಿಯಲ್ಲಿ ಮುದ್ರಾಂಕ ಮಾರಾಟಗಾರರು ಎಂದು ಹೇಳಿರುವುದರಿಂದ ಇದು ನ್ಯಾಯಿಕ ಮತ್ತು ನ್ಯಾಯೇತರ ಮುದ್ರಾಂಕ ಮಾರಾಟಗಾರರಿಬ್ಬರಿಗೂ ಅನ್ವಯಿಸುತ್ತದೆ. ಆದ್ದರಿಂದ ನಿಯಮ 3(iia) ಅನ್ವಯ ಎಲ್ಲಾ ಮುದ್ರಾಂಕ ಮಾರಾಟಗಾರರಿಗೆ ದಸ್ತಾವೇಜು ಬರಹಗಾರರ ಪರವಾನಗಿ ನೀಡಲು ಅರ್ಜಿ ಸಲ್ಲಿಸಿದಲ್ಲಿ ಅದನ್ನು ಪರಿಗಣಿಸಲು ಸೂಚಿಸಿದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು.

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

COMP-A/C
STP 79-05-06

41